ಓ.ಎಸ್. ನಂಃ 244/2021

ಪಿ.ಡಬ್ಲ್ಯೂಃ 2

**ದಿನಾಂಕ 02.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜಿ.ಎಲ್.ಡಿ. ವಕೀಲರಿಂದಃ**

1. ನಾನು ಬಿ.ಎ. ಪದವೀದರನಾಗಿರುತ್ತೇನೆ. ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ವಾದಿ ಕರೆದುಕೊಂಡು ಬಂದಿರುತ್ತಾರೆ. ನಾನು ನನ್ನ ಸಹಿ ಹಾಕುವ ಪೂರ್ವದಲ್ಲಿ ದಾಖಲೆಯಲ್ಲಿ ಬರೆದಿರುವ ವಿಷಯಗಳನ್ನು ಓದಿ ತಿಳಿದುಕೊಂಡ ನಂತರದಲ್ಲಿ ನನ್ನ ಸಹಿಯನ್ನು ಹಾಕುತ್ತೇನೆ ಎಂದರೆ ಸರಿ.

2. ದಿನಾಂಕ 08.07.2020 ರಂದು ನಿಪಿ.5 ರ ದಾಖಲೆಗೆ ಮಿರ್ಲೆಯಲ್ಲಿ ನನ್ನ ಸಹಿಯನ್ನು ಮಾಡಿರುತ್ತೇನೆ. ನಿಪಿ.5 ರ ದಾಖಲೆಗೆ ನಾನು ಸಹಿ ಮಾಡುವಾಗ ವಾದಿ, ಪ್ರತಿವಾದಿ, ಬಿಕ್ಲಮ್ ದಾರರಾದ ವಸಂತ ಕುಮಾರ ಮತ್ತು ಬಿಂದು ಎನ್ನುವವರು ಹಾಜರಿದ್ದರು. ಸದರಿ ಬಿಂದು ಎನ್ನುವವರು ಮಿರ್ಲೆ ಗ್ರಾಮದವರು. ನಾನು ಅಂಕನಹಳ್ಳಿ ಗ್ರಾಮದವನು. ನಾನು ಅಂಕನಹಳ್ಳಿ ಗ್ರಾಮದ ನಿವಾಸಿ ಅಲ್ಲ ಬದಲಾಗಿ ನಾಟನಹಳ್ಳಿ ಗ್ರಾಮದ ನಿವಾಸಿ ಎಂದರೆ ಸರಿಯಲ್ಲ. ನೀವು ಅಂಕನಹಳ್ಳಿ ಗ್ರಾಮದ ನಿವಾಸಿ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ತಮ್ಮ ಆಧಾರ ಕಾರ್ಡ್ ನ್ನು ತೋರಿಸಿದ್ದು ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

3. ನಿಪಿ.5 ರ ದಾಖಲೆಯನ್ನು ಸದರಿ ದಿನ ಮಧ್ಯಾಹ್ನ 12.30-1.00 ಗಂಟೆ ಸಮಯದಲ್ಲಿ ತಾಯಾರಿಸಲಾಗಿರುತ್ತದೆ. ನಿಪಿ.5 ರ ದಾಖಲೆಯನ್ನು ಮಿರ್ಲೆಯಲ್ಲಿ ತಯಾರಿಸಿರುವುದಿಲ್ಲ ಬದಲಾಗಿ ಸಾಲಿಗ್ರಾಮದಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.5 ರ ದಾಖಲೆಯಡಿಯಲ್ಲಿ ಮಾರಾಟವಾದ ಜಮೀನಿನ ಸರ್ವೇ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂಧಿ ನನಗೆ ಗೊತ್ತಿಲ್ಲ ಎಂದರೆ ಸರಿ.

4. ಮಾರಾಟದ ಹಣಕಾಸಿನ ವ್ಯವಹಾರವು 4 ಲಕ್ಷ ರೂಪಾಯಿಗೆ ಆಗಿರುತ್ತದೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ನಾನು ವಾದಿಯ ಚಿತಾವನೆಯ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ ಆದರೆ ಪ್ರತಿವಾದಿಯು ಬಳ್ಳೂರು ಗ್ರಾಮದವರಾಗಿರುತ್ತಾರೆ. ಯಾವ ಮುಖಬೆಲೆಯ ನೋಟುಗಳನ್ನು ವಾದಿ ಸದರಿ ದಿನದಂದು ಪ್ರತಿವಾದಿಗೆ ನೀಡಿದ್ದರು ಎಂದು ನನಗೆ ಗೊತ್ತಿಲ್ಲ ಆದರೆ ಸದರಿ ದಿನದಂದು ವಾದಿಯು ಪ್ರತಿವಾದಿಗೆ ಒಟ್ಟು 3,70,000/- ರೂಪಾಯಿಯನ್ನು ನೀಡಿದ್ದರು.

5. ಪ್ರತಿವಾದಿಯು ನಿಪಿ.5 ರ ದಾಖಲೆಗೆ ಸಹಿಯನ್ನು ಮಾಡದಿದ್ದರು ಸಹ ಅವರು ಸಹಿ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ಬಿಕ್ಲಮ್ ದಾರರು ಸೇರಿ ಮೋಸದಿಂದ ನಿಪಿ.5 ರ ದಾಖಲೆಯನ್ನು ಸುಳ್ಳಾಗಿ ಸೃಷಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ವ್ಯವಹಾರದ ಮಾತುಕತೆ ಆಗಿರುವುದಿಲ್ಲ, ಪ್ರತಿವಾದಿಯು ವಾದಿಯಿಂದ ಯಾವುದೇ ಹಣವನ್ನು ಪಡೆದಿರುವುದಿಲ್ಲ ಮತ್ತು ಪ್ರತಿವಾದಿಯು ನಿಪಿ.5 ರ ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**